**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಗೋಕಾಕ**

**ಸಿ.ಸಿ. ನಂ.1787/2022**

**ಪಿರ್ಯಾದುದಾರರುಃ**

ಸಂಜಯ್ ಮೋಹನ್ ಸತಪುಟೆ ,
55 ವರ್ಷ, ವೃತಿಃ ವ್ಯಾಪಾರ,
ಸಾಃ ಸರ್ವೆ ನಂ.210 ಪೋಲಿಸ್ ಕ್ವಾಟರ್ಸ್ ಎದುರು,
ಲಕ್ಷ್ಮೀ ಗುಡಿ ರೋಡ, ಲಕ್ಷ್ಮೀ ಬಡಾವಣೆ ಗೋಕಾಕ,
ತಾಃ ಗೋಕಾಕ, ಜಿ. ಬೆಳಗಾವಿ.

**- ವಿರುದ್ಧ -**

**ಆರೋಪಿ**

ಕಲ್ಲಯ್ಯ ವಿರುಪಾಕ್ಷಯ್ಯ ಇಂದ್ರಗಿಮಠ,
41 ವರ್ಷ, ವೃತಿಃ ಕಾಂಟ್ರಾಕ್ಟರ್
ಸಾಃ ಎಂ ಬಿ ನಂ.58/51 ಹಳೆ ಕನಕಪುರ, ಪೋಸ್ಟ್
ಗಿಣಿಗೇರ ತಾಃ ಜಿ ಕೊಪ್ಪಳ ರಾಜ್ಯ ಕರ್ನಾಟಕ

**ಆಪಾದನೆ**

**ಶ್ರೀ ರಾಜೀವ ಗೋಳಸಾರ, ಬಿ.ಎ., ಎಲ್.ಎಲ್.ಎಂ., ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿ, ಗೋಕಾಕ,** ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆಪಾದನೆ ಮಾಡುತ್ತಿದ್ದೇನೆಃ

ಪಿರ್ಯಾದಿದಾರರು ಮತ್ತು ಆರೋಪಿಯಾದ ನೀವು ಸುಮಾರು ಒಳ್ಳೆಯ ಪರಿಚಯಸ್ಥರಾಗಿರುತ್ತೀರಿ, ಹೀಗಿರುವಾಗ ಆರೋಪಿಯಾದ ನೀವು ನಿಮ್ಮ ಗುತ್ತಿಗೆ ಕೆಲಸದೊಂದಿಗೆ ಸ್ಟೀಲ್ ಇಂಡಸ್ಟ್ರಿರಿಯನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಡಿಸೆಂಬರ್-2020 ರಲ್ಲಿ ಪಿರ್ಯಾದುದಾರರಿಗೆ ರೂ.21,00,000/-ಗಳ ಕೈಗಡ ಸಾಲ ಕೇಳಿದ್ದು, ಅದಕ್ಕೆ ಪಿರ್ಯಾದುದಾರರು ರೂ.20,11,800/- ಗಳನ್ನು ದಿನಾಂಕ 13-01-2021 ರಿಂದ 07-06-2021 ರ ದಿನಗಳ ಒಳಗೆ ಹಣವನ್ನು ಆರೋಪಿಯಾದ ನಿಮಗೆ ನೀಡಿರುತ್ತಾರೆ. ಹೀಗಿರುವಾಗ ಆರೋಪಿಯಾದ ನೀವು ಸದರಿ ಸಾಲದ ಹಣವನ್ನು06 ತಿಂಗಳ ಒಳಗಾಗಿ ಮರಳಿ ಕೊಡುತ್ತೇನೆಂದು ತಿಳಿಸಿರುತ್ತಿರಿ.

06 ತಿಂಗಳು ಮುಗಿದಾದ ನಂತರ ಪಿರ್ಯಾದುದಾರರು ಆರೋಪಿಯಾದ ನಿಮಗೆ ಸದರಿ ಸಾಲದ ಹಣವನ್ನು ಮರು ಪಾವತಿ ಮಾಡುವಂತೆ ಕೇಳಿದಾಗ, ಆರೋಪಿಯಾದ ನೀವು ರೂ.8,90,000/- ಹಣವನ್ನು ಮಾತ್ರ ಪಾವತಿ ಮಾಡಿದ್ದು, ಉಳಿದ ರೂ.11,22,800/- ಸಾಲದ ಹಣವನ್ನು ಪಾವತಿ ಮಾಡಿರುವುದಿಲ್ಲ, ನಂತರ ಪಿರ್ಯಾದುದಾರರು ಮತ್ತೊಮ್ಮೆ ಸಾಲದ ಹಣವನ್ನು ಮರುಸಂದಾಯ ಮಾಡುವಂತೆ ವಿನಂತಿಸಿಕೊಂಡಾಗ ಕೊನೆಗೆ ನೀವು ದಿಃ 20-04-2022 ರಂದು ನಿಮ್ಮ ಖಾತೆಯಾದ ಸ್ಟೇಟ್ ಬ್ಯಾಂಕ ಆಫ್ ಇಂಡಿಯಾ ಶಾಖೆ ಗಿಣಿಗೇರ ಇಲ್ಲಿಗೆ ಸೇರಿದ ಚೆಕ್ ನಂ.589125 ನೇದ್ದನ್ನು ರೂ.11,22,800/- ಎಂದು ನಮೂದು ಮಾಡಿ ಪಿರ್ಯಾದುದಾರರಿಗೆ ನೀಡಿರುತ್ತಿರಿ.

ಆರೋಪಿಯಾದ ನೀವು ನೀಡಿದ ಚೆಕ್ಕನ್ನು ಪಿರ್ಯಾದುದಾರರು ತಮ್ಮ ಖಾತೆಯಿರುವ ಗೋಕಾಕ ಅರ್ಬನ್ ಕೋ ಆಪರೇಟಿವ್ ಕ್ರೆಡಿಟ್ ಬ್ಯಾಂಕ್ ಆಫ್ ಇಂಡಿಯಾ, ಗೋಕಾಕ ಶಾಖೆ ಇಲ್ಲಿಗೆ ನಗದೀಕರಣಕ್ಕೆ ಹಾಜರುಪಡಿಸಿದಾಗ, ಆರೋಪಿಯಾದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ (Funds Insufficient) ಎಂಬ ಹಿಂಬರಹ ಹಾಗೂ ಮೆಮೋದೊಂದಿಗೆ ದಿನಾಂಕ 25-04-2022 ರಂದು ಸದರಿ ಚೆಕ್ ಅಮಾನ್ಯಗೊಂಡಿರುತ್ತದೆ.

ನಂತರ ಪಿರ್ಯಾದುದಾರರು ಆರೋಪಿಯಾದ ನೀವು ನೀಡಿದ ಚೆಕ್ಕು ಅಮಾನ್ಯಗೊಂಡ ಬಗ್ಗೆ ತಮ್ಮ ವಕೀಲರ ಮುಖಾಂತರ ದಿನಾಂಕ 30-04-2022 ರಂದು ತಿಳುವಳಿಕೆ ಪತ್ರವನ್ನು ಆರೋಪಿಯಾದ ನಿಮಗೆ ನೋಂದಾಯಿತ ಅಂಚೆ ಮೂಲಕ ಕಳುಹಿಸಿದ್ದು, ಸದರಿ ನೋಟಿಸು ದಿನಾಂಕ 02-05-2022 ರಂದು ಜಾರಿಯಾಗಿದ್ದರೂ ಸಹ ಆರೋಪಿಯಾದ ನೀವು ನಿಗದಿತ ಸಮಯದಲ್ಲಿ ಚೆಕ್ಕಿನ ಹಣವನ್ನು ಮರುಸಂದಾಯ ಮಾಡದೆ ಇರುವ ಕಾರಣ ನೀವು ವರ್ಗಾವಣೀಯ ಲಿಖಿತಗಳ ಅಧಿನಿಯಮದ ಕಲಂ.138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿರುತ್ತದೆ.

## ಆರೋಪಿಯ ಹೇಳಿಕೆ

ಪ್ರಶ್ನೆ ನಂ.1. ಈಗ ಓದಿ ಹೇಳಿದ ಆಪಾದನೆಯನ್ನು ಕೇಳಿಸಿಕೊಂಡಿರಾ ? ತಿಳಿಯಿತೇ ?

ಉತ್ತರಃ

ಪ್ರಶ್ನೆ ನಂ.2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ? ಅಥವಾ ವಿಚಾರಣೆಯಾಗಬೇಕಾ ?

ಉತ್ತರಃ

ಮೇಲಿನ ಆಪಾದನೆಯನ್ನು ಆರೋಪಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಆರೋಪಿಯು ಕೊಟ್ಟ ಉತ್ತರವು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ಈ ದಿನ ಅಂದರೆ ದಿನಾಂಕ **21-02-2024** ರಂದು ತೆರೆದ ನ್ಯಾಯಾಲಯದಲ್ಲಿ ದೃಡೀಕರಿಸುತ್ತೇನೆ.

**(ರಾಜೀವ ಗೋಳಸಾರ)**
**ಪ್ರಧಾನ ಪ್ರ.ದ.ನ್ಯಾ. ದಂ, ಗೋಕಾಕ.**